

# ಅನ್ನದ ಬಟ್ಟಲಿನಲ್ಲಿ ಕೋಲಾಹಲ!

**ಸಹನಾ ಕಾಂತಬೈಲು**
ರೈತ ಮಹಿಳೆ, ಬಾಲಂಬಿ

ಐವತ್ತು ವರ್ಷಗಳ ಹಿಂದೆ ಹೆಚ್ಚಿನ ರೈತರು ಆಹಾರ ಧಾನ್ಯಗಳನ್ನೇ ಬೆಳೆಯುತ್ತಿದ್ದರು. ನನ್ನ ಮನೆಯಲ್ಲೂ ನಾನು ಚಿಕ್ಕವಳಿದ್ದಾಗ, ಅಂದರೆ ನಲವತ್ತು ವರ್ಷಗಳ ಹಿಂದೆ ಭತ್ತ ಬೆಳೆಯುತ್ತಿದ್ದೆವು. ನಮ್ಮ ಮನೆ ಬಳಕೆಗೆ ಆಗಿ ಮಿಕ್ಕಿದ್ದನ್ನು ಮಾರುತ್ತಿದ್ದೆವು. ಈಗ ಹಿಂದೆ ಇಲ್ಲಿ ಗದ್ದೆ ಇತ್ತು ಎಂಬ ಯಾವ ಕುರುಹೂ ಇಲ್ಲ. ಇಲ್ಲೆಲ್ಲ ಅಡಿಕೆ ಮರಗಳು ತಲೆ ಎತ್ತಿ ನಿಂತಿವೆ. ನಮ್ಮ ಸುತ್ತಮುತ್ತಲ ಮನೆಯವರೂ ಗದ್ದೆಯನ್ನು ಅಡಿಕೆ ತೋಟವಾಗಿ ಪರಿವರ್ತಿಸಿದ್ದಾರೆ.

ಇದು ನಮ್ಮೂರಲ್ಲಿ ಮಾತ್ರ ನಡೆದ ವಿದ್ಯಮಾನವಲ್ಲ. ಇಡೀ ರಾಜ್ಯದಲ್ಲೇ ಆಗಿದೆ. ಇಂದು ಕೃಷಿಕರು ಆಹಾರಧಾನ್ಯ ಬೆಳೆಯುವುದನ್ನು ಬಿಟ್ಟು ಹೆಚ್ಚು ಹಣ ಸಿಗುವ ಅಡಿಕೆ, ರಬ್ಬರ್, ಕಾಫಿ ಇತ್ಯಾದಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವುದು ಕೃಷಿ ಕ್ಷೇತ್ರದಲ್ಲಾದ ಪ್ರಮುಖ ಬೆಳವಣಿಗೆ ಎನ್ನಬಹುದು. ಇದರಿಂದ ಈಗಾಗಲೇ ಆಹಾರಧಾನ್ಯಗಳ ಕೊರತೆ ತಲೆದೋರಿದೆ. ಎಲ್ಲ ಆಹಾರಧಾನ್ಯಗಳ ಬೆಲೆ ಗಗನಮುಖಿಯಾಗುತ್ತಿದೆ. ರೈತರು ಹಿಂದಿನಂತೆ ಆಹಾರಧಾನ್ಯಗಳ ಬೆಳೆಗೆ ಮರಳದಿದ್ದರೆ ಹಣ ಕೊಟ್ಟರೂ ಅಕ್ಕಿ ಸಿಗದ ಪರಿಸ್ಥಿತಿ ಎದುರಾಗುವುದರಲ್ಲಿ ಸಂಶಯವಿಲ್ಲ.



ಯುವಕರು ಪಿತ್ರಾರ್ಜಿತ ಆಸ್ತಿ ಇದ್ದರೂ ಅದನ್ನು ಬಿಟ್ಟು ಉದ್ಯೋಗಕ್ಕೆಂದು ನಗರಗಳಿಗೆ ತೆರಳುತ್ತಿರುವುದು ಕೃಷಿ ಕ್ಷೇತ್ರದಲ್ಲಾದ ಮಹತ್ತರ ಬದಲಾವಣೆ. ಇದರಿಂದ ಕೃಷಿ ಮಾಡುವವರಿಲ್ಲದೆ ಎಷ್ಟೋ ಜಮೀನುಗಳು ಹಾಳುಬಿದ್ದಿವೆ. ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿವೆ. ನನ್ನ ತಂದೆಯವರ ಕಾಲದಲ್ಲಿ ಹಟ್ಟಿಗೊಬ್ಬರ, ಸೊಪ್ಪು ಬಿಟ್ಟರೆ ಬೇರೆ ಏನನ್ನೂ ಬೆಳೆಗಳಿಗೆ ಹಾಕುತ್ತಿರಲಿಲ್ಲ. ಇಂದು ಜಾನುವಾರು ಸಾಕಾಣಿಕೆ ಲಾಭದಾಯಕವಲ್ಲವೆಂದು ಬಹುತೇಕ ರೈತರು ಹಸು ಸಾಕುವುದನ್ನು ನಿಲ್ಲಿಸಿದ್ದಾರೆ. ಬೆಳೆಗಳಿಗೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಸಮೃದ್ಧವಾಗಿ ಬಳಸಿ ಮಣ್ಣಿನ ಫಲವತ್ತತೆ ಹಾಳುಮಾಡಿದ್ದಾರೆ. ಕೀಟನಾಶಕಗಳಲ್ಲಿ ಮುಳುಗಿದ ತರಕಾರಿಗಳು ಹೊಟ್ಟೆ ಸೇರುತ್ತಿವೆ. ಇದರಿಂದ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದೇವೆ. ಈಗೀಗ ಕೆಲವು ರೈತರು ಎಚ್ಚೆತ್ತುಕೊಂಡು ಸಾವಯವ ಪದ್ಧತಿಯಲ್ಲಿ ಕೃಷಿ ಮಾಡಲು ಮುಂದಾಗುತ್ತಿರುವುದು ಕೃಷಿ ಕ್ಷೇತ್ರದಲ್ಲಿ ಒಂದು ಆಶಾದಾಯಕ ಬೆಳವಣಿಗೆ.

## ಹಸಿರುಕ್ರಾಂತಿ ಯಶಸ್ಸೂ ಸುಸ್ಥಿರತೆಯ ಪ್ರಶ್ನೆಯೂ...



**ಚಂಸು ಪಾಟೀಲ**
ರೈತ, ಕೂನಬೇವು, ರಾಣೇಬೆನ್ನೂರು

ಕಳೆದ ನಾಲ್ಕೈದು ದಶಕಗಳಲ್ಲಿ ಭಾರತೀಯ ಜನಜೀವನದ ಮೇಲೆ ಅಗಾಧ ಪರಿಣಾಮ ಬೀರಿದ ಸಂಗತಿ ಎಂದರೆ, ಅದು ನಿಸ್ಸಂಶಯವಾಗಿ ಹಸಿರು ಕ್ರಾಂತಿಯೆ! ಕೃಷಿಯೇ ನಮ್ಮ ಪ್ರಧಾನ ಉದ್ಯೋಗವಾದ್ದರಿಂದ ನಮ್ಮ ಸಂಸ್ಕೃತಿ, ಪರಂಪರೆಗಳು ಕೂಡ ಅದಕ್ಕೆ ಪೂರಕವಾಗಿಯೇ ಬೆಳೆದು ಬಂದಿದ್ದವು. ಪ್ರಾದೇಶಿಕ ಬೆಳೆಪದ್ಧತಿಗಳಲ್ಲಿ ಸಾಕಷ್ಟು ವೈವಿಧ್ಯ ಇತ್ತು. ಹಾಗೆಂದೇ ನಮ್ಮ ಆಹಾರಪದ್ಧತಿಯು ವೈವಿಧ್ಯಮಯವಾಗಿತ್ತು. ಇದು ನಮ್ಮನ್ನು ದೈಹಿಕವಾಗಿಯೂ, ಮಾನಸಿಕವಾಗಿಯೂ ಸದೃಢಗೊಳಿಸುವಂತಿತ್ತು.

ಹಸಿರು ಕ್ರಾಂತಿಯ ಪರಿಣಾಮ ನಮ್ಮ ಬೆಳೆಪದ್ಧತಿಗಳು ಕಣ್ಮರೆಯಾಗಿ ಏಕಬೆಳೆ ಪದ್ಧತಿ ರೂಢಿಗೆ ಬಂತು. ಅದಲ್ಲದೆ ಇದು ಆಹಾರಪದ್ಧತಿಗಳಲ್ಲಿನ ವೈವಿಧ್ಯತೆಯನ್ನೂ ನುಂಗಿ ಹಾಕಿತು. ಕಲುಷಿತ ಪರಿಸರ, ಕಲುಷಿತ ಆಹಾರದ ದೆಸೆಯಿಂದ ಆರೋಗ್ಯಕರ ಬದುಕೇ ದುಸ್ತರವಾಗಿರುವಂತಹ ಜಗತ್ತನ್ನು ನಾವಿಂದು ನೋಡುತ್ತಿದ್ದೇವೆ.

ರೈತರ ಪರಿಸ್ಥಿತಿಯಂತೂ ತೀರ ಸಂಕಷ್ಟಕ್ಕೆ ತಳ್ಳಲ್ಪಟ್ಟಿದೆ. ಅನ್ನದಾತರ ಆತ್ಮಹತ್ಯೆಗಳು ಕಳೆದ ಎರಡುಮೂರು ದಶಕಗಳಿಂದಲೂ ಮುಂದುವರೆದಿವೆ. ಪರಿಹಾರ ಇನ್ನೂ ಮರೀಚಿಕೆ ಆಗಿಯೇ ಉಳಿದಿದೆ. ‘ಸುಸ್ಥಿರ ಕೃಷಿ’ ಎಂಬ ಮಾತನ್ನು ಪದೇ ಪದೇ ಕೇಳ್ತಾ ಇದ್ದೇವೆ. ಕೃಷಿಯಲ್ಲಿ ಸುಸ್ಥಿರತೆ ಬರುವುದು ಎಂದು? ಪ್ರಶ್ನೆ ಹಾಗೆ ಉಳಿದಿದೆ. ಒಂದು ದೇಶದ ಸಮೃದ್ಧಿಯಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುವ ಕೃಷಿ ಕ್ಷೇತ್ರ ಬಹುರಾಷ್ಟ್ರೀಯ ಬಂಡವಾಳಶಾಹಿಗಳ ಪಾಲಾದರೆ ಜನಸಾಮಾನ್ಯರ ಗತಿ ಏನು? ಉತ್ತರ ದಿನದಿನಕ್ಕೂ ಕಗ್ಗಂಟಾಗುತ್ತಲೇ ಸಾಗಿದೆ...